ನಕ್ಕಿದ್ದ. ಅವನ ಮುಂದಿನ ನಡೆಯ ಸೂಚನೆ ಸಿಕ್ಕಿತ್ತು. ಆದರೆ, ಹಾಗಾಗಬಾರದೆಂದು ಕಣ್ಣೊಳಗೆ ಕಣ್ಣಿಟ್ಟು ನೋಡಿ, 'ನೀನು ಮಾಡುತ್ತಿರುವ ಪಾಪಕರ್ಮಕ್ಕೆ ಗುಹೆಯೊಳಗೆ ಅಡಗಿ ಕುಳಿತು ಧ್ಯಾನ ಮಾಡಿ ಪ್ರಾಯಶ್ಚಿತ್ತ ಮಾಡಿಕೊಳ್ಳಬಹುದೆಂದುಕೊಳ್ಳಬೇಡ' ಎಂದು ಎದೆ ಬಗೆಯುವಂತೆ ಕೂಗಿ ಹೇಳಿದ್ದೆ. ತಟ್ಟನೆ ಈ ಮೊಗಸಾಲೆಯ ಮೂಲೆಯಲ್ಲಿ ನನ್ನನ್ನೊಂದು ಪೀಠದ ಮೇಲೆ ಕುಳ್ಳಿರಿಸಿ ಅವಕುಂಠನ ಹೊದೆಸಿ, 'ಆತುಮದ ಹಸಿವು ತಡಿಲಿಕ್ಕಾಗದಾಗ ನಿನ್ನ ಬಳಿ ಬರುವೆ. ಅಲ್ಲಿ ತನಕ ಹೀಗೇ ಇರು' ಎಂದಂದು ಹೊರಟು ಹೋದವನು ಮುಖ ತಪ್ಪಿಸಿ ಓಡಾಡುತ್ತಿದ್ದಾನೆ. ಇತ್ತ ಸುಳಿಯಲೇ ಇಲ್ಲ. ಒಂದಲ್ಲ ಒಂದು ದಿನ ಅಂತರಂಗಕ್ಕೆ ಬರುತ್ತಾನೆ ಎಂದು ಕಾಯುತ್ತಿರುವುದೇ ಬಂತು... ಇವನ ಮನೆ ನೋಡಿಕೊಳ್ಳುವ ಈ ಮಾಲಿಗಳು ಎಷ್ಟು ಹೊತ್ತಿಗೊ ಹಾಕುವ, ಆ ಮಾತಾಡುವ ಜನರು ಕಾಣಿಸುವ ಪೆಟ್ಟಿಗೆಯಿಂದಾಗಿ ಇವ ಮಾಡುತ್ತಿರುವ ನುಣ್ಣನೆಯ ಪಾತಕಗಳು ಅಲ್ಪ ಸ್ವಲ್ಪ ತಿಳಿಯುತ್ತಿದೆ. ಇತ್ತೀಚೆಗಿನ ಸಂಗತಿಗಳನ್ನು ನೋಡುವಾಗ ಮಾತ್ರ ಒಂದು ಕ್ಷಣ ಇವ ನನ್ನತ್ತ ಬರಲಿಯಪ್ಪ ಶಿವಶಿವಾ ಅಂತ ಒಳಗು ಗೋಗರಿತಾ ಇದೆ. ಇತ್ತ ಬಂದರೆ ನಾನು ಹಿಡಿದುಬಿಡುತ್ತೇನೆಂದು ಅವನಿಗೂ ಗೊತ್ತಿದೆ. ಅದಕ್ಕೇ ಈ ಮಹಾಮನೆಗೆ ಬರುವುದೇ ಇಲ್ಲ ದೊರೆ.

ರಾಜಗುರುವಿನ ಲಹರಿ ತುಂಡರಿಸುವಂತೆ ಮಾತಾಡುವ, ಪೆಟ್ಟಿಗೆ ಒಡೆದು ಹೋಗುವಂತೆ ನಿರೂಪಕಿಯ ಧ್ವನಿ ಕೇಳಲಾರಂಭಿಸಿತು. ತೊಂಬತ್ತರ ದಶಕದಲ್ಲಿ ಈ ಪೆಟ್ಟಿಗೆಗೆ ಹತ್ತಿದ ಕ್ರೈಮ್‌ಡೈರಿ ಎಂಬ ವೈರಸ್ ನಿರೂಪಕರ ಧ್ವನಿ ಮೇಲೆ ಆಕ್ರಮಣ ಮಾಡಿದ್ದರ ಪರಿಣಾಮ ಚಿತ್ರ ವಿಚಿತ್ರ ಭಯಾನಕ ಏರಿಳಿತಗಳಲ್ಲಿ ವಾರ್ತಾವಾಚಕರು, ನಿರೂಪಕರು ಒದರಲಾರಂಭಿಸಿದ್ದು ಈಗೀಗಂತು ಅದು ಮಿತಿ ಮೀರಿ ಸ್ವತಃ ಅವರಿಗೂ ತಡಕೊಳ್ಳಲಿಕ್ಕಾಗದಷ್ಟು ಭಯಾನಕ ಧ್ವನಿಯಲ್ಲಿ ಕಿರುಚುತ್ತಿದ್ದರು. ಈಗಲೂ ಅಂತದ್ದೇ ಒಂದು ಧ್ವನಿ, ದೇಶದ ಮೇಲೆ ಎರಗಿದ ಡೆಡ್ಲಿ ಕಂಟಕ ಎದುರಿಸಲು ನಾಡಿನ ದೊರೆ ಕೊಟ್ಟಿದ್ದ ಕರೆ ಬಗ್ಗೆ ಹೇಳುತ್ತ ಅದು ಈ ದಿನ ಹೇಗೆ ಅಭೂತಪೂರ್ವ ಯಶಸ್ಸು ಕಂಡಿದೆಯೆಂದು ಮತ್ತೆ ಮತ್ತೆ ವಿವರಿಸುತ್ತಿದ್ದಳು. ಹೌದು. ಇದೊಂತರಾ ಡೆಡ್ಲಿ ಕಂಟಕವೇ. ಇಡೀ ಭೂಲೋಕ ನಡುಗಿಸುತ್ತ ಅದು ಈಗ ತೆಂಕಣಕ್ಕೆ ಕಾಲಿಟ್ಟಿತ್ತು. ತೆಂಕಣ ದೇಶದ ಬಡಗು ತುದಿಯಿಂದ ತೆಂಕು ತುದಿಯವರೆಗೂ ಜನ ಕಂಗೆಟ್ಟಿದ್ದರು. ಒಂದು ಕಡೆ ಪ್ರಾಕೃತಿಕ ವಿಕೋಪದಿಂದ ಮನೆಮಾರು ಕಳಕೊಂಡು ಇನ್ನೂ ಅದರಿಂದ ಹೊರ ಬರಲಾಗದೆ ಒದ್ದಾಡುತ್ತಿದ್ದಾಗ ಕಣ್ಣಿಗೆ ಕಾಣದ ಜೀವಿಯೊಂದು ಅನ್ಯಗ್ರಹದಿಂದ ಭೂಲೋಕಕ್ಕೆ ಬಂದಿದೆಯೆಂದು, ಅದು ಭೂಮಿಯ ಮೂಲೆ ಮೂಲೆಯಲ್ಲೂ ಸವಾರಿ ಮಾಡುತ್ತ ಎದುರಿಗೆ ಸಿಕ್ಕವರ ಮೈಯೊಳಗೆ ಹೊಕ್ಕು ಖಾಯಿಲೆಯಿಂದ ಬಳಲಿಸಿ ಹೆಡಮುರಿ ಕಟ್ಟಿ ಸಾಯಿಸುತ್ತ ಈಗ ಬಡಗಲದಿಂದ ತೆಂಕಣ ದೇಶಕ್ಕೆ ಕಾಲಿಡುತ್ತಿದೆಯೆಂದು ಸುದ್ದಿಯಾಗಿತ್ತು. ಆದರೆ, ಅಷ್ಟು ಹೊತ್ತಿಗಾಗಲೇ ಭೂಲೋಕದ ಬುದ್ಧಿವಂತ ಜನ ಆ ಅದೃಶ್ಯ ಜೀವಿಯನ್ನು ಓಡಿಸಲು ಕೆಲವು ಉಪಾಯಗಳನ್ನು ಕಂಡುಕೊಂಡಿದ್ದರಿಂದ ತೆಂಕಣ ದೇಶದ ರಾಜ ಆ ಉಪಾಯಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ತನ್ನ ದೇಶದ ಜನರನ್ನು ಕಾಪಾಡಬೇಕೆಂಬ ಸಂಕಲ್ಪ ತೊಟ್ಟ. ಅದಕ್ಕಾಗಿ ಪರಿಣಿತರೊಂದಿಗೆ ಗಂಭೀರ ಮಂತ್ರಾಲೋಚನೆಗಳು ನಡೆದು ಕೊನೆಗೂ ಆ ದಿನ ಪ್ರಜೆಗಳ ಮುಂದೆ ಒಂದು ಸವಾಲು ಹಾಕಿ ಅದನ್ನು ಎಲ್ಲರೂ ಸ್ವ–ಇಚ್ಛೆಯಿಂದ ಜಾರಿಗೊಳಿಸಬೇಕೆಂದು ಮಾತಾಡುವ ಪೆಟ್ಟಿಗೆಯೊಳಗಿಂದ ಕಾಣಿಸಿಕೊಂಡು ತನ್ನ ಜನರಿಗೆ ಕೇಳಿಕೊಂಡಿದ್ದ. ಸಾಮಾನ್ಯವಾಗಿ ಶತ್ರುಗಳನ್ನು ಅವರಿಗಿಂತಲೂ ಸನ್ನದ್ಧರಾಗಿ ಶಸ್ತ್ರಗಳಿಂದಲೇ ಎದುರಿಸುವುದು ಲೋಕರೂಢಿ. ಆದರೆ, ಈ ಅದೃಶ್ಯ ಅನ್ಯ ಗ್ರಹ ಜೀವಿಯನ್ನು ಜನಗಳೂ ಅದೃಶ್ಯರಾಗಿದ್ದುಕೊಂಡೇ ಎದುರಿಸಬೇಕಿತ್ತು.

ಅದರಂತೆ ಈ ದಿನ ಜನ ದೊರೆಯ ಮಾತಿಗೆ ಬೆಲೆ ಕೊಟ್ಟು ಜವಾಬ್ದಾರಿಯಿಂದ ತಮ್ಮತಮ್ಮ ದಿಡ್ಡಿ ಬಾಗಿಲು ಹಾಕಿಕೊಂಡು ಒಳಗೇ ಉಳಿದುಕೊಂಡಿದ್ದರು. ದೊರೆ ಇನ್ನೊಂದು ಮಾತನ್ನೂ ಹೇಳಿದ್ದ. ಅನ್ಯಗ್ರಹ ಜೀವಿಯ ಅದೃಶ್ಯ ದಾಳಿಗೊಳಗಾಗಿ ಖಾಯಿಲೆ ಬಿದ್ದವರನ್ನು ಶುಶ್ರೂಷೆ ಮಾಡುತ್ತಿರುವ ಚಿಕಿತ್ಸಕರಿಗೆ ಗೌರವ ಸೂಚಕವಾಗಿ ನಿಗದಿತ ಸಮಯಕ್ಕೆ ನಿಮ್ಮ ನಿಮ್ಮ ಜಗಲಿ ಕಟ್ಟೆಗಳಿಂದಲೇ ಒಂದು ಸಲಾಮು ಕೊಡಬೇಕೆಂದೂ ಹೇಳಿದ್ದ. ನಿರೂಪಕಿ ಮತ್ತೆ ಮತ್ತೆ ಅದನ್ನೂ ನೆನಪಿಸುತ್ತ